**SC No. 258/2023**
**PW-24**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 258/2023

| | | |
|---|---|---|
| ಸಾಕ್ಷಿದಾರರ ಹೆಸರು | ವಿನಯ್ ಇ.ವಿ. | ಪ್ರಮಾಣ ವಚನ ಮಾಡಿದ ದಿನಾಂಕ: 11.02.2026 |
| ತಂದೆಯ/ಗಂಡನ ಹೆಸರು | ವಾಸಪ್ಪ | |
| ವಯಸ್ಸು | 49 ವರ್ಷ | |
| ವೃತ್ತಿ | ಪೊಲೀಸ್ ಇನ್ಸ್‌ಪೆಕ್ಟರ್ , ಎಸ್.ಪಿ. ಕಛೇರಿ ಹಾಸನ | ಪ್ರಾ.ಸಾಃ 24 |
| ವಾಸ ಸ್ಥಳ | ಹಾಸನ | ಚಾ.ಸಾಃ 34 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಫೆಬ್ರವರಿ *2023* ರಿಂದ ಜೂನ್ *2023* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *24.05.2023* ರಂದು ಈ ಕೇಸಿನ ಕಡತವನ್ನು ಪಿ.ಎಸ್.ಐ ಕಿರಣ್ ಚಾಸಾ-*33* ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆಗಿದ್ದ ತನಿಖೆಯನ್ನು ಪರಿಶೀಲನೆ ಮಾಡಿದ್ದೇನು. ನಂತರ ಆರೋಪಿ ಪತ್ತೆಗಾಗಿ ಠಾಣಾ ಸಿಬ್ಬಂದಿಗಳಾದ ಚಾಸಾ-*24* ಮತ್ತು *25* ರವರನ್ನು ನೇಮಿಸಿದ್ದೇನು. ನಂತರ ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ವೇಳೆಯಾಗಿದ್ದರಿಂದ ತನಿಖೆಯನ್ನು ಮುಂದುವರಿಸಿರಲಿಲ್ಲ.

ನಂತರ ದಿನಾಂಕ *25.05.2023* ರಂದು ಮೈಸೂರಿನ ಮೆಡಿಕಲ್ ಕಾಲೇಜು ಶವಗಾರಕ್ಕೆ

ಭೇಟಿ ನೀಡಿ ಪಂಚರ ಸಮಕ್ಷಮ ಮೃತೆಯ ಶವದ ಮೇಲೆ ಶವ ತನಿಖಾ ವರದಿಯನ್ನು ಪಂಚರ ಸಮಕ್ಷಮ ತಯಾರಿಸಿದ್ದೆನು. ಸದರಿ ಶವ ತನಿಖೆಯನ್ನು ಬೆಳಗ್ಗೆ *8.30* ಯಿಂದ *10.30* ವರೆಗೂ ಜರುಗಿಸಿದ್ದೆನು. ಶವ ತನಿಖಾ ಕಾಲದಲ್ಲಿ ಫೋಟೋಗಳನ್ನು ತೆಗೆಸಿದ್ದೆನು. ಸಾಕ್ಷಿದಾರರು ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*3* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಗಳನ್ನು ನಿಪಿ. *3(ಸಿ)* ಮತ್ತು *3(ಡಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು *2* ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–*4* ಮತ್ತು *5* ಎಂದು ಗುರುತಿಸಲ್ಪಟ್ಟಿರುತ್ತವೆ.

ನಂತರ ಮೃತೆಯ ಸಾವಿನ ಕಾರಣವನ್ನು ತಿಳಿಯಲು ಕರ್ತವ್ಯ ನಿರತ ವೈದ್ಯರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿಕೊಂಡಿದ್ದೆನು. ಸಾಕ್ಷಿದಾರರು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.***32* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.***32* **(ಎ)** ಎಂದು ಗುರುತಿಸಲಾಯಿತು.

ಮೃತಳ ಶವ ಪರೀಕ್ಷೆಯಾದ ನಂತರ ಮೃತ ದೇಹವನ್ನು ಆಕೆಯ ಸಂಬಂಧಿಕರಿಗೆ ಹಸ್ತಾಂತರಿಸಲಾಗಿತ್ತು. ನಂತರ ಅದೇ ದಿನ ಮಧ್ಯಾಹ್ನ *3.00* ಗಂಟೆ ಸಮಯದಲ್ಲಿ ಆರೋಪಿತನ ಪತ್ತೆಗಾಗಿ ನೇಮಿಸಿದ್ದ ಸಿಬ್ಬಂದಿಗಳು ಆರೋಪಿತನನ್ನು ಪತ್ತೆ ಮಾಡಿ ನನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿದ್ದರು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *27* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು **ನಿಪಿ.** *27***(ಬಿ)** ಎಂದು ಗುರುತಿಸಲಾಯಿತು. ನಂತರ ಆರೋಪಿತನನ್ನು ವಿಚಾರಣೆಗೆ ಒಳಪಡಿಸಿ ಸೂಕ್ತ ದಸ್ತಗಿರಿ ನಿಯಮ

ಪಾಲಿಸಿಕೊಂಡು ಆರೋಪಿತನ ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆರೋಪಿತನು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೋದರೆ ಕೃತ್ಯಕ್ಕೆ ಬಳಸಿದ್ದ ಸ್ಟೀಲ್ ರಾಡ್ ಅನ್ನು ಹಾಜರುಪಡಿಸುವುದಾಗಿ ತಿಳಿಸಿದ್ದು ಅದರಂತೆ ಠಾಣೆಗೆ ಸಾಕ್ಷಿದಾರರಾದ ವಿಶ್ವರೂಪ ಮತ್ತು ರವೀಂದ್ರ ಕುಮಾರ್ ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಮಾಹಿತಿಯನ್ನು ನೀಡಿ ತನಿಖಾ ಕಾಲದಲ್ಲಿ ಸಹಕರಿಸಬೇಕೆಂದು ಕೋರಿಕೊಂಡ ಮೇರೆಗೆ ಅವರಿಬ್ಬರು ಒಪ್ಪಿಕೊಂಡಿದ್ದು ನಂತರ ಪಂಚರು, ನಾನು, ಆರೋಪಿ ಮತ್ತು ಸಿಬ್ಬಂದಿಗಳೊಂದಿಗೆ ಸಿದ್ದಲಿಂಗಾಪುರದ ಬೇಕರಿ ಹತ್ತಿರ ಆರೋಪಿತನು ತೋರಿಸಿದ ಜಾಗಕ್ಕೆ ಹೋಗಿದ್ದು ಸ್ಥಳ ದಲ್ಲಿ ಕೃತ್ಯ ನೋಡಿದ ಕುಮಾರ್ ರವರು ಇದ್ದು ಅವರನ್ನು ಸಹ ಬೇಕರಿ ಒಳಗೆ ಆರೋಪಿತನ ಹಿಂದೆ ಹೋಗಿದ್ದು ಆರೋಪಿತನು ಬೇಕರಿಯಲ್ಲಿ ಕೃತ್ಯಕ್ಕೆ ಬಳಸಿದ್ದ ಸ್ಟೀಲ್ ರಾಡ್ ಅನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡೆನು. ನಂತರ ಸ್ಥಳ ದಲ್ಲಿ ಮೃತೆಯ ಹೆಪ್ಪುಗಟ್ಟಿದ್ದ ರಕ್ತವನ್ನು ಮಾದರಿಗಾಗಿ ಶೇಖರಿಸಿಕೊಂಡಿದ್ದೆನು ಮತ್ತು ಸ್ಥಳ ದಲ್ಲಿಯೇ ಮೃತೆಯು ಬಿದ್ದಾಗ ನೆಲದ ಮೇಲೆ ಇದ್ದ ಮ್ಯಾಟ್ ಮೇಲೆ ಮೃತೆಯ ರಕ್ತ ಇದ್ದು ಅದನ್ನು ಸಹ ತನಿಖೆಯ ಸಂಬಂಧ ವಶ ಪಡಿಸಿಕೊಂಡಿದ್ದೆನು. ಈ ಮೂರು ವಸ್ತುಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ಎಸ್ ಎಂಬ ಇಂಗ್ಲೀಷ್ ಅಕ್ಷರದ ಸೀಲಿನಿಂದ ಮೊಹರು ಮಾಡಿದ್ದೆನು. ನಂತರ ಈ ಸಂಬಂಧ ಸ್ಥಳ ದಲ್ಲಿಯೇ ಮಹಜರ್ ಕ್ರಮ ವನ್ನು ಸಂಜೆ *5.00* ರಿಂದ *6.00* ಗಂಟೆಯವರೆಗೆ ಜರುಗಿಸಿದ್ದು ಫೋಟೋಗಳನ್ನು ತೆಗೆಸಿದ್ದೆನು. ಸಾಕ್ಷಿದಾರರು ಆರೋಪಿತನ ಸ್ವ-ಇಚ್ಚಾ ಹೇಳಿಕೆಯ ಭಾಗವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.*33*** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.*33* (ಎ)** ಎಂದು

ಗುರುತಿಸಲಾಯಿತು. ನಾನು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.*34*** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.** *34 (ಎ)* ಎಂದು ಗುರುತಿಸಲಾಯಿತು. ನಾನು ನಿಪಿ-***34*** ರಡಿಯಲ್ಲಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-***5*** ರಿಂದ *7* ಎಂದು ಗುರುತಿಸಲ್ಪಟ್ಟಿರುತ್ತವೆ. ನಂತರ ಆರೋಪಿ, ಪಂಚರು ಮತ್ತು ಸಿಬ್ಬಂದಿಯೊಂದಿಗೆ ವಾಪಸ್ಸು ಠಾಣೆಗೆ ಬಂದು ಆರೋಪಿಯನ್ನು ಸೂಕ್ತ ಕಾವಲಿನೊಂದಿಗೆ ಠಾಣೆಯಲ್ಲಿ ಇರಿಸಿದ್ದೆ. ನಂತರ ಮಹಜರ್ ಸಮಯದಲ್ಲಿ ವಶಪಡಿಸಿಕೊಂಡಿದ್ದ ವಸ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ ***43/23*** ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಸಾಕ್ಷಿ ಕುಮಾರ್ ರವರ ಹೇಳಿಕೆ ಮತ್ತು ಸಿಬ್ಬಂದಿ ಸುಮನ್ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು.

ದಿನಾಂಕ ***26.05.2023*** ರಂದು ತನಿಖೆ ಮುಂದುವರೆಸಿ ಆರೋಪಿತನು ತನಿಖೆಗೆ ಅವಶ್ಯಕತೆ ಇಲ್ಲದ ಕಾರಣ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆರೋಪಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು.

ದಿನಾಂಕ ***29.05.2023*** ರಂದು ಕೃತ್ಯ ನಡೆದ ಸ್ಥಳದ ಸ್ಕೆಚ್ ಅನ್ನು ಮಾಡಿಕೊಡಲು ಲೋಕೋಪಯೋಗಿ ಇಲಾಖೆಯವರಿಗೆ ಪತ್ರ ಬರೆದಿದ್ದೆನು. ಸಾಕ್ಷಿದಾರರು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.*35*** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು

**ನಿಪಿ.** *35 (ಎ)* ಎಂದು ಗುರುತಿಸಲಾಯಿತು.

ದಿನಾಂಕ *01.06.2023* ರಂದು ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಯವರಿಗೆ ಮೃತೆಯ ಬಗ್ಗೆ ಮಾಹಿತಿ ಕೋರಿ ಪತ್ರ ಬರೆದಿದ್ದೆನು.

ದಿನಾಂಕ *05.06.2023* ರಂದು ಈ ಹಿಂದೆ ಮೃತೆಗೂ ಮತ್ತು ಆರೋಪಿತನಿಗೂ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಮೃತೆಯೂ ದೂರು ನೀಡಿದ್ದು ಆ ದೂರಿನ ದಾಖಲಾತಿಗಳನ್ನು ಪಾಂಡವಪುರ ಪೊಲೀಸ್ ಠಾಣೆಯಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *2* ಎಂದು ಗುರುತಿಸಲ್ಪಟ್ಟಿರುತ್ತದೆ. ಸ್ವೀಕೃತಿ, ನಟರಾಜು ಮತ್ತು ಆರೋಪಿಯ ಮೋಹನ್ ಕುಮಾರ್ ರವರ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*36* ರಿಂದ *38* ಎಂದು ಗುರುತಿಸಲಾಯಿತು. ಪಾಂಡವಪುರ ಪೊಲೀಸ್ ಠಾಣೆಗೆ ಕೊಟ್ಟಂತಹ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*39* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *39*(ಎ) ಎಂದು ಗುರುತಿಸಲಾಯಿತು. ಅದೇ ದಿನ ಠಾಣಾ ಸಿಬ್ಬಂದಿ ಕುಂಬಾರ್ ರವರು ಮೈಸೂರು ಮೆಡಿಕಲ್ ಕಾಲೇಜಿನ ಮೃತೆಯ ವಿಶ್ರ ಮತ್ತು ಬಟ್ಟೆಗಳನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ *45/23* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಸಿಬ್ಬಂದಿ ಕುಂಬಾರ್ ಮತ್ತು ಅಬಿಜಿತ್ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

**SC No. 258/2023**
**PW-24**

ನನಗೆ ವರ್ಗಾವಣೆಯಾದ ಕಾರಣ ಈ ಪ್ರಕರಣದ ಕಡತವನ್ನು ಚಾಸಾ-*35* ರವರಿಗೆ ಹಸ್ತಾಂತರಿಸಿದ್ದೆನು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತನಿಗೆ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು ಆದರು ಆರೋಪಿತನು ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿರುವುದಿಲ್ಲ ಆದ್ದರಿಂದ ಆರೋಪಿತನ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರವಿಚಾರಣೆಃ ಇಲ್ಲ .**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**